ಸಾಕ್ಷಿಯನ್ನು ದಿ: 04.03.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಮುಂದುವರೆದ ಪಾಟೀ ಸವಾಲುಃ- ವಾದಿಗಳ ಪರ ವಕೀಲರಿಂದ ಃ-**

1. ನಾನು ಬಿ ಎ ಪದವಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಐ.ಟಿ.ಐ ಕಾಲೇಜಿನಲ್ಲಿ ಟೈಪಿಸ್ಟ್ ಆಗಿ ಕೆಲಸ ಮಾಡಿ ಈಗ ನಿವೃತ್ತಿ ಹೊಂದಿರುತ್ತೇನೆ. ದಕ್ಷಿಣ ದಿಕ್ಕಿಗೆ 18 ಅಡಿ ರಸ್ತೆಯನ್ನು 06.09.1999 ರಲ್ಲಿ ಬಿಟ್ಟುಕೊಟ್ಟಿರುತ್ತೇವೆ. 18 ಅಡಿ ಜಾಗ ಬಿಟ್ಟ ಬಗ್ಗೆ ಭೂ ಪರಿವರ್ತನೆ ಆದೇಶದ ಪ್ರತಿ ಇರುತ್ತದೆ. ರಸ್ತೆಗಾಗಿ ಬಿಟ್ಟ ಜಾಗಕ್ಕೆ ಸಂಬಂದಪಟ್ಟಂತೆ ನಮಗಾಗಲೀ ಅಥವಾ ಬೇರೆಯವರಿಗಾಗಲೀ ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿ. ಲಕ್ಷಮ್ಮನಿಗೆ ಎಷ್ಟು ಅಡಿ ಸ್ವತ್ತನ್ನು ಮಾರಾಟ ಮಾಡಿರುತ್ತೇನೆಂದು ನೆನಪಿಲ್ಲ. ವಾದಿಗೆ ದಾವಾ ಮಾರಾಟ ಮಾಡುವುದಕ್ಕಿಂತ ಪೂರ್ವದಲ್ಲೇ ಲಕ್ಷ್ಮಮ್ಮನಿಗೆ ಆಸ್ತಿ ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಲಕ್ಷಮ್ಮನ ಕ್ರಯ ಪತ್ರ ಹಾಜರು ಪಡಿಸುತ್ತಿಲ್ಲ ಎಂದರೆ ಸರಿಯಲ್ಲ. 18 ಅಡಿ ರಸ್ತೆಗೆ ಸಂಬಂದಪಟ್ಟಂತೆ ದಾಖಲಾತಿ ಇರುವುದಿಲ್ಲ. ಲಕ್ಷಮ್ಮನ ಆಸ್ತಿಯ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಯಾರ್ಯಾರಿಗೆ ನಿವೇಶನಗಳನ್ನು ಮಾರಾಟ ಮಾಡಿರುತ್ತೇನೆಂದು ಗೊತ್ತಿಲ್ಲ. ಸರ್ವೆ ನಂ.775/2 ನ್ನು ನಿವೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಿದ ನಂತರ ಎಷ್ಟು ಜಾಗ ಉಳಿದಿದೆ ಎಂದು ಅಳತೆ ಮಾಡಿಸಲು ಪ್ರಯತ್ನ ಪಟ್ಟಿರುತ್ತೇನೆ ಆದರೆ ಸಾಧ್ಯವಾಗಿರುವುದಿಲ್ಲ. ಒಂದು ವರ್ಷದ ಹಿಂದೆ ಅಳತೆ ಮಾಡಿಸಲು ಹೋಗಿರುತ್ತೇನೆ. ನಿಪಿ.1 ನ್ನು ಬರೆದುಕೊಟ್ಟಾಗ ದಕ್ಷಿಣದ ಕಡೆಗೆ ರಸ್ತೆಯಿತ್ತು. ಲಕ್ಷಮ್ಮ ಮನೆ ಕಟ್ಟಿರುವುದಿಲ್ಲ. ನಿವೇಶನ ಮಾರಾಟ ಮಾಡಿದ ನಂತರ ಸದರಿಯವರಿಗೆ ಅಳತೆ ಮಾಡಿ ಕೊಟ್ಟಿರುತ್ತೇವೆ. 18 ಅಡಿ ರಸ್ತೆ ಬಿಟ್ಟು ನಿವೇಶನಗಳನ್ನು ಮಾರಾಟ ಮಾಡಿರುತ್ತೇನೆ. ರಸ್ತೆಯನ್ನು ಯಾರು ಒತ್ತುವರಿ ಮಾಡಿರುತ್ತಾರೆಂದು ಗೊತ್ತಿಲ್ಲ. ನಾನು ರಸ್ತೆ ಬಿಡದೆ ಸುಳ್ಳು ಕ್ರಯ ಪತ್ರಗಳನ್ನು ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ. ಮಾರಾಟ ಮಾಡುವ ಪೂರ್ವದಲ್ಲಿ ನಾವು ರಸ್ತೆ ಮತ್ತು ಸೈಟುಗಳನ್ನು ವಿಭಾಗಿಸಿ ನಕ್ಷೆ ತಯಾರಿಸಿ ಮಾರಾಟ ಮಾಡಬೇಕಿತ್ತು

ಎಂದರೆ ಸಾಕ್ಷಿಯು ರಸ್ತೆಗಾಗಿ ಸ್ಥಳ ಬಿಟ್ಟು ಮಾರಾಟ ಮಾಡಿರುತ್ತೇವೆ ಆದರೆ ನಕ್ಕೆ ತಯಾರಿಸಿಲ್ಲ ಎಂದು ನುಡಿಯುತ್ತಾರೆ.

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ